ಶ್ರೀ ಎನ್. ಕರಿಬಸವನಗೌಡ. —ದುರಾಡಳಿತ ಮತ್ತು ದುರುಪಯೋಗದಿಂದ ಸಂಘಗಳನ್ನು ಕಟ್ಟುವುದಕ್ಕೆ ಮುಂದೆ ಬರುತ್ತಾರೆ: ಇದು ಸದುದ್ದೇಶದಿಂದ ಕಟ್ಟಿದಂಥ ಶಾಲೆ, ಸರ್ಕಾರ ಖಾಸಗಿ ರಂಗದ ಶಾಲೆಗಳನ್ನು ತೆಗೆದುಕೊಳ್ಳುವುದಿಲ್ಲ ಎಂದು ತೀರ್ಮಾನ ಮಾಡಿರುವುದು ಸೂಕ್ತವಲ್ಲ ಈ ಶಾಲೆಯನ್ನು ಸರ್ಕಾರ ತನ್ನ ವಶಕ್ಕೆ ತೆಗೆದುಕೊಳ್ಳಬೇಕೆಂದು ಕಳಕಳಿಯಿಂದ ಒತ್ತಾಯ ಮಾಡುತ್ತೇನೆ.

ಶ್ರೀಮತಿ ನಾಗಮ್ಮ ಸಿ. ಕೇಶವಮೂರ್ತಿ.—ಈಗ ನಾವು ಶಾಲೆಗಳನ್ನು ತೆಗೆದುಕೊಳ್ಳುವುದರಿಂದ ಒಟ್ಟೊಂದು ನಮಗೆ ದೊಡ್ಡ ಸಮಸ್ಯೆ ಉಂಟಾಗುತ್ತದೆ. ಉಪಾಧ್ಯಾಯರ ಸೇವಾವಧಿ ವಿಷಯ. ೧೦-೫೫ ವರ್ಷಗಳಿಂದ ಒಂದೇ ಶಾಲೆಯಲ್ಲಿ ಕೆಲಸ ಮಾಡಿ, ಸರ್ಕಾರಿ ನೌಕರರಾಗಿ ಪರಿವರ್ತನೆಯಾದಾಗ ಸೀನಿಯಾರಿಟಿ ಪ್ರಶ್ನೆ ಕೂಡ ಬಂದು, ತೊಂದರೆಯಾಗುತ್ತದೆ.

ಶ್ರೀ ಎನ್. ಕರಿಬಸವನ ಗೌಡ —ಖಾಸಗಿ ರಂಗದಲ್ಲಿರತಕ್ಕ ಹೈಸ್ಕೂಲುಗಳನ್ನು ತೆಗೆದುಕೊಂಡು ನಡೆಸುವುದಕ್ಕೆ ಇರತಕ್ಕ ತೊಂದರೆ ತೊಂದರೆ ಏನಿದೆ ?

ಶ್ರೀಮತಿ ನಾಗಮ್ಮ ಸಿ. ಕೇಶವಮೂರ್ತಿ.—ಈಗ ನಾವು ಖಾಸಗಿ ಶಾಲೆಗಳಲ್ಲಿ ಕೆಲಸ ಮಾಡುತ್ತಿರುವ ಉಪಾಧ್ಯಾಯರುಗಳಿಗೆ ಸಂಬಳ ಮಾತ್ರ ಕೊಡುತ್ತೇವೆ. ಮಿಕ್ಕ ಜವಾಬ್ದಾರಿಯನ್ನು ಮ್ಯಾನೇಜ್‌ಮೆಂಟಿನವರೇ ನೋಡಿಕೊಳ್ಳಬೇಕು. ಸರ್ಕಾರದ ನೀತಿ ಏರುಪ್ಪು ಈ ಶಾಲೆಯನ್ನು ತೆಗೆದುಕೊಳ್ಳುವುದ ಕ್ಕಾಗುವುದಿಲ್ಲ.

Preparation of drought / flood Atlas for Karnataka.

569 SRI G. BASAVANNAPPA (Holehonnur). —Will the Minister of State for Major and Medium Irrigation be pleased to State;—

(a) whether there is any proposal to prepare and publish a Drought/Flood Atlas for Karnataka;

(b) if so, the details may be given;

(c) the action, Government proposes to take for linking the drought and flood areas for mutual benefits?

SRI B. B. CHIMMANAKATTI (Minister of State for Major and Medium Irtigation)

(a) There is a proposal to prepare a Flood Atlas in the State. Drought Atlas is being prepared by Government of India.

(b) The field data for the preparation of Flood Atlas from the year 1980 onwards is being collected.

(c) There are certain proposals for diverting surplus water of west flowing stream to augment the needs of drought areas in the eastern part of the State These are under study.

ಶ್ರೀ ಭೀಮಣ್ಣ ಖಂಡ್ರೆ. —(ಶ್ರೀ ಬಿ. ಬಸವಣ್ಣಪ್ಪನವರ ಪರವಾಗಿ).—ಕರ್ನಾಟಕದ ಬರಗಾಲ ಹಾಗೂ ನೆರೆಯ ಭೂಪಟವನ್ನು ತಯಾರಿಸಿ ಪ್ರಕಟಪಡಿಸುವ ಸಲಹೆ ಏನಾದರೂ ಇದೆಯೆಂದು ಕೇಳಿದ್ದಕ್ಕೆ ಹೌದು ಎಂದು ಹೇಳಿದ್ದೀರಿ. ಎಷ್ಟು ದಿವಸದಲ್ಲಿ ಮುಗಿಸುತ್ತೀರಾ ?

ಶ್ರೀ ಬಿ. ಬಿ. ಚಿಮ್ಮನಕಟ್ಟಿ —ಮಾನ್ಯ ಅಧ್ಯಕ್ಷರೇ, ಬರಗಾಲ ಮತ್ತು ನೆರೆಯ ಹಾವಳಿಗೆ ಸಂಬಂಧ ಪಟ್ಟ ಭೂಪಟವನ್ನು ಕೇಂದ್ರ ಸರ್ಕಾರದವರು ತಯಾರು ಮಾಡುತ್ತಾರೆ. ಕೇಂದ್ರ ಸರ್ಕಾರದ ನಿರ್ದೇಶನದ ಮೇರೆಗೆ ರಾಜ್ಯ ಸರ್ಕಾರ ೧೯೮೦ನೇ ಇಸವಿಯಲ್ಲಿ ಡಾಟಾ ಕಲೆಕ್ಟ್ ಮಾಡುವುದಕ್ಕೆ ಪ್ರಾರಂಭ ಮಾಡಲಾಗಿದೆ. ಕನಿಷ್ಟ ಹತ್ತು ವರ್ಷಗಳಾದರೂ ಬೇಕಾಗಬಹುದು.

ಶ್ರೀ ಪಿ. ರಾಂದೇವ್.—ತಮ್ಮ ಉತ್ತರದಲ್ಲಿ ಪಶ್ಚಿಮಕ್ಕೆ ಹರಿಯುವ ನದಿಗಳನ್ನು ಪೂರ್ವ ಭಾಗದ ಕಡೆಗೆ ತಿರುಗಿಸುವ ಹಲವಾರು ಸಲಹೆಗಳಿವೆಯೆಂದು ಹೇಳಿದ್ದೀರಿ, ಯಾವ ಯಾವ ನದಿಗಳು ಎಂದು ಹೇಳುತ್ತೀರಾ ?

ಶ್ರೀ ಬಿ. ಬಿ. ಚಿಮ್ಮನಕಟ್ಟಿ.—ಮಾತಾಯಿ, ನೇತ್ರಾವತಿ ನದಿಗಳಿಂ, ಇನ್ನು ಕೆಲವು ನದಿಗಳ ಬಗ್ಗೆ ರಿಪೋರ್ಟ್ ಕೊಟ್ಟಿದ್ದಾರೆ. ಇವುಗಳ ಬಗ್ಗೆ ಪರಿಶೀಲನೆ ನಡೆಯುತ್ತಿದೆ

ಶ್ರೀ ಪಿ. ರಾಂದೇವ್.—ಈ ಕಾರ್ಯಕ್ರಮಕ್ಕೆ ಎಷ್ಟು ಕೋಟಿ ರೂಪಾಯಿಗಳು ಖರ್ಚಾಗುತ್ತದೆ?

ಶ್ರೀ ಬಿ. ಬಿ. ಚಿಮ್ಮನಕಟ್ಟಿ.—ಸದ್ಯಕ್ಕೆ ಹೇಳುವುದಕ್ಕಾಗುವುದಿಲ್ಲ.

ಶ್ರೀ ಕೆ. ರಾಂಭಟ್.—ಪಶ್ಚಿಮಕ್ಕೆ ಹರಿಯುವ ನದಿಗಳನ್ನು ಪೂರ್ವ ಭಾಗಕ್ಕೆ ತಿರುಗಿಸುವುದರಿಂದ, ಪಶ್ಚಿಮ ಭಾಗದಲ್ಲಿ ಬರಗಾಲ ಬರುವ ಸಾಧ್ಯತೆ ಇರುವುದರಿಂದ, ಈ ವಿಚಾರವನ್ನು ಸರ್ಕಾರದವರು ಪರಿಶೀಲನೆ ಮಾಡುವರೆ ?

ಶ್ರೀ ಬಿ. ಬಿ. ಚಿಮ್ಮನಕಟ್ಟಿ.—ಇನ್ನು ತೀರ್ಮಾನ ತೆಗೆದುಕೊಂಡಿಲ್ಲ ? ಈ ವಿಚಾರವನ್ನು ಪರಿಶೀಲನೆ ಮಾಡಿಂದಾಗ, ತಮ್ಮ ಸಲಹೆಯನ್ನು ಗಮನಿಸದಲ್ಲಿಟ್ಟುಕೊಂಡು ನೋಡಿಕೊಳ್ಳುವಂತ ಜವಾಬ್ದಾರಿ ಇದೆ.

ಶ್ರೀ ಯು. ಟಿ. ಫರೀದ್.—ಇಂಥ ಒಂದು ಪ್ರೊಪೋಸಲ್ ಚನ್ನಬಸಪ್ಪನವರು ಮಂತ್ರಿಗಳಾಗಿದ್ದಾಗ ನಮ್ಮ ಮುಂದೆ ಬಂದಾಗ ಇದರಿಂದ ನಮ್ಮ ಭಾಗಕ್ಕೆ ತೊಂದರೆಯಾಗುತ್ತೆ ಈ ಯೋಜನೆಯನ್ನು ಕೈಬಿಡಬೇಕೆಂದು ಕೇಳಿಕೊಂಡಿದ್ದೆವು, ಅದರಿಂದ ಅವರು ಕೈಬಿಟ್ಟಿದ್ದರು, ಇದು ತಮಗೆ ಗೊತ್ತಿದೆಯೆ ?

ಶ್ರೀ ಬಿ. ಬಿ. ಚಿಮ್ಮನಕಟ್ಟಿ.—ಈ ವಿಚಾರ ನನಗೆ ಗೊತ್ತಿಲ್ಲ.

ಶ್ರೀ ಕೆ. ಎಚ್. ಹನುಮೇಗೌಡ.—ಪಶ್ಚಿಮಘಟ್ಟದಲ್ಲಿ ಹುಟ್ಟಿದಂತೆ ನದಿಗಳು ಎಷ್ಟು ಟಿ.ಎಂ.ಸಿ. ನೀರನ್ನು ಅರಬ್ಬೀ ಸಮುದ್ರಕ್ಕೆ ಒಯ್ಯುತ್ತವೆ ಎಂಬುದನ್ನು ದಯವಿಟ್ಟು ತಿಳಿಸುತ್ತೀರಾ ?

ಶ್ರೀ ಬಿ ಬಿ ಚಿಮ್ಮನಕಟ್ಟಿ.—ಎಷ್ಟು ನೀರು ಹೊರಕ್ಕೆ ಹೋಗುತ್ತಿದೆ ಎನ್ನುವ ಬಗ್ಗೆ ಅಂಕಿ ಅಂಶಗಳಿಲ್ಲ. ಮಾನ್ಯ ಸದಸ್ಯರಿಗೆ ಬೇಕಾದರೆ ಒದಗಿಸಿಕೊಡುತ್ತೇನೆ.

ಶ್ರೀ ಭೀಮಣ್ಣ ಖಂಡ್ರೆ.—ಸೌಟರ್ ಸ್ಟೇಟ್ ರಿವರ್ ಡಿಸ್‌ಪ್ಯೂಟ್ ಇರುವುದರಿಂದ ನಿಧಾನವಾಗಿದೆ ಎಂದು ತಾವು ಹೇಳಿದಿರಿ. ತಾವು ಕೇಂದ್ರ ಸರ್ಕಾರದ ಜೊತೆಯಲ್ಲಿ ಸಮಾಲೋಚನೆ ಮಾಡಿ ಆದಷ್ಟು ಬೇಗ ಇದು ಇತ್ಯರ್ಥವಾಗುವಂತೆ ಮಾಡಬೇಕಾ. ಏಕೆಂದರೆ ಇದು ರಾಜ್ಯದ ಅಭಿವೃದ್ಧಿ ದೃಷ್ಟಿಯಿಂದ ಬಹಳ ಮುಖ್ಯವಾದ ವಿಚಾರ. ಒಂದು ವೇಳೆ ಕೇಂದ್ರ ಸರ್ಕಾರದಿಂದ ಆಗದಿದ್ದರೆ ರಾಜ್ಯ ಸರ್ಕಾರದವರೇ ತಮ್ಮ ಸ್ವಂತ ಖರ್ಚಿನಿಂದ ಇದನ್ನು ಏತಕ್ಕೆ ಮಾಡಿಸಬಾರದು ?

ಶ್ರೀ ಬಿ. ಬಿ. ಚಿಮ್ಮನಕಟ್ಟಿ.—ಬರಗಾಲ ಪ್ರದೇಶದಲ್ಲಿ ಶಾಶ್ವತವಾದ ಪರಿಹಾರವನ್ನು ಕೈಗೊಳ್ಳುವುದಕ್ಕೆ ರೆವಿನ್ಯೂ ಇಲಾಖೆಯವರು ಹೈ ಪವರ್ ಕಮಿಟಿಯನ್ನು ನೇಮಕಾ ಮಾಡಿದ್ದಾರೆ, ಅವರು ಇದನ್ನು ಸಂಪೂರ್ಣವಾಗಿ ಚರ್ಚೆಮಾಡಿ ಅಲ್ಲಿರತಕ್ಕ ರಿಸೋರ್ಸಸ್‌ನ್ನು ಉಪಯೋಗಿಸಿಕೊಳ್ಳಲಿಕ್ಕೆ ಸಾಧ್ಯತೆ ಇದೆಯೇ ಎಂಬುದನ್ನು ಯೋಚನೆ ಮಾಡುತ್ತಿದ್ದಾರೆ. ಅವರ ವರದಿ ಸರ್ಕಾರಕ್ಕೆ ಬಂದ ಮೇಲೆ ಆ ಪ್ರದೇಶದಲ್ಲಿರತಕ್ಕ ತೊಂದರೆಯನ್ನು ನಿವಾರಿಸಬಹುದು. ಈಗ ಕೃಷ್ಣಾ ಮೇಲ್ದಂಡೆ ಯೋಜನೆ, ಕಾರಂಜಿ ಇನ್ನೂ ಮುಂತಾದ ಅನೇಕ ಮೇಜರ್, ಮಿಡಿಯಂ ಇರಿಗೇಷನ್ ಯೋಜನೆಗಳನ್ನು ನಾವು ತೆಗೆದುಕೊಂಡಿದ್ದೇವೆ. ಈ ಎಲ್ಲ ಕೆಲಸಗಳೂ ಮುಗಿದರೆ ಬರಗಾಲದ ಪ್ರಶ್ನೆ ನಿವಾರಣೆಯಾಗುತ್ತದೆಂದು ನಾವು ಅಂದು ಕೊಂಡಿದ್ದೇವೆ.

ಶ್ರೀ ಕಾಪು ಸಂಜೀವಶೆಟ್ಟಿ.—ಪಶ್ಚಿಮ ಘಟ್ಟದಿಂದ ಹುಟ್ಟಿದ ನದಿಗಳು ಪಶ್ಚಿಮಾಭಿಮುಖವಾಗಿ ಹರಿಯುವುದನ್ನು ತಪ್ಪಿಸಿ ಪೂರ್ವಾಭಿಮುಖವಾಗಿ ಹರಿಸಿ ಬರಗಾಲ ಪ್ರದೇಶಗಳಿಗೆ ಅನುಕೂಲ ಮಾಡಿಕೊಡಲಾಗಿದೆಯೆಂದು ತಾವು ಹೇಳಿದಿರಿ. ಮಾನ್ಯ ಸದಸ್ಯರಾದ ಹನುಮೇಗೌಡರು ಹೇಳಿದಂತೆ ಸುಮಾರು ೭೫೦ ಟಿ.ಎಂ.ಸಿ.ಎಫ್.ಟಿ., ನೀರು ಸಮುದ್ರಕ್ಕೆ ವೃಥಾ ಹರಿದು ಹೋಗುತ್ತಿದೆ, ಮಳೆಗಾಲದಲ್ಲಿ ಸುಮಾರು ೩ ತಿಂಗಳು ಈ ರೀತಿ ಹೋಗುತ್ತದೆ. ಇನ್ನುಳಿದ ೯ ತಿಂಗಳಲ್ಲಿ ನಮಗೆ ನೀರು ಸಿಕ್ಕುವಂತೆ ಮಾಡಬೇಕು.

MR. SPEAKER.—Question Hour is over.